DOC-337
T.P-2

51st Year of Publication ★ SATYAVADI Daily, MYSORE 4

ಪ್ರ. 1565 16-7-1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಕಛೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

Space available
For Permanent Advertisement

ಸ್ಥಾಪಕರು : ತರುಣ ಚಕ್ರವರ್ತಿ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಕಾಶ್ಮೀರದಲ್ಲಿ ಉಪಚುನಾವಣೆ ಬಹಿಷ್ಕರಿಸಲು ಬೋಧನೆ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಜುಲೈನಲ್ಲಿ ಸಂಭ್ರಮಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರೆ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಜೆನ್ನಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ ಮೋದಿಯವರು ಡಾ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಯವರು ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಅದರ ವಿಶ್ವಾಸಗಳಿಂದ ಸೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ವಿಶ್ವಸುಂದರಿ

ಬ್ರೆಜಿಲ್ಲಿನ ಸಲ್ವೆಡರ್‌ನ 20 ವರ್ಷದ ಮಾರ್ತಾ ವಾ ಕೊಂಸಿಲೋಸ್ ವಿಶ್ವ ಸುಂದರಿಯಾಗಿ ಆರಿಸಲ್ಪಟ್ಟಳು.

★

ಕಮ್ಯೂನಿಸ್ಟ್ ಪಾರ್ಟಿ

ಬೊಂಬಾಯಿ— ಕಮ್ಯೂನಿಸ್ಟ್ ಪಾರ್ಟಿಯನ್ನು ನಿಷೇಧಿಸಬೇಕೆಂದು ಸ್ವತಂತ್ರ ಪಕ್ಷದ ಖಜಾಂಚಿ ಕೂಪರ್ ಹೇಳಿದರು.

ಕ್ಷಯರೋಗ

ಇತಿಹಾಸ ಪ್ರಾರಂಭದಿಂದಲೂ ಕ್ಷಯರೋಗವು ಮಾನವ ಜನಾಂಗವನ್ನು ಪೀಡಿಸುತ್ತ ಬಂದಿದೆ ; ಎಂಟು ಸಾವಿರ ವರ್ಷಗಳಷ್ಟು ಹಿಂದಿನ ಈಜಿಪ್ಟಿನ ಶವಗಳಲ್ಲೂ ಸಹ ಕ್ಷಯರೋಗವಿದ್ದ ಬಗ್ಗೆ ಸಾಕ್ಷ್ಯಾಧಾರಗಳು ದೊರೆತಿವೆ : ನಮ್ಮ ವೇದಗಳಲ್ಲೂ ಕ್ಷಯರೋಗದ ಪ್ರಸ್ತಾಪವಿದೆ — ಈಗ ನಮ್ಮ ದೇಶದಲ್ಲಿ ಸರಿಸುಮಾರು 60 ರಿಂದ 70 ಲಕ್ಷ ಕ್ಷಯರೋಗದಿಂದ ನರಳುತ್ತಿದ್ದಾರೆ — ನಮ್ಮ ದೇಶದಲ್ಲಿ ಇಂದು ಪ್ರತಿ ವರ್ಷ ಒಂದು ಲಕ್ಷ ಜನರಲ್ಲಿ 80 ರಿಂದ 100 ಜನರು ಈ ರೋಗಕ್ಕೆ ಬಲಿಯಾಗುತ್ತಿದ್ದಾರೆ ; ಚಿಕಿತ್ಸೆ ಮಾಡಿರುವ ಪ್ರಸಂಗಗಳಲ್ಲಿ ಮರಣ ಪ್ರಮಾಣ 15 ಕ್ಕೆ ಇಳಿದಿರುವದು — ನಮ್ಮ ದೇಶದಲ್ಲಿ ಇಂದು 469 ಕ್ಷಯರೋಗ ಚಿಕಿತ್ಸಾಲಯಗಳಿವೆ; ಜೊತೆಗೆ 12000 ಚಿಕಿತ್ಸಾಲಯಗಳೂ ಪ್ರಾಥಮಿಕ ಕೇಂದ್ರಗಳೂ ಆಸ್ಪತ್ರೆಗಳೂ ಇವೆ — ಬಿ ಸಿ ಜಿ ಚುಚ್ಚುಮದ್ದು ಮತ್ತು ಕ್ಷಯರೋಗ ನಿರೋಧಕ ಔಷಧಗಳ ಪ್ರಯೋಗದಿಂದ ಕ್ಷಯರೋಗ ನಿಯಂತ್ರಣ ಕಾರ್ಯ ತೀವ್ರಗೊಂಡಿದೆ.

★

ಸಾರಾಯಿ ವಶ

ಬೊಂಬಾಯಿ— ಪೋಲೀಸರು 9 ಮೋಟಾರು ವಾಹನಗಳನ್ನು ಅಡ್ಡಕಟ್ಟಿ, ರೂ. 25000 ಬೆಲೆಯ 2500 ಲೀಟರು ಅಕ್ರಮ ಸಾರಾಯನ್ನು ವಶಪಡಿಸಿಕೊಂಡು, 16 ಮಂದಿಯನ್ನು ಬಂಧಿಸಿದರು.

★

ಕುದುರೆ ಜೂಜು

ಮೈಸೂರು— ಇಲ್ಲಿ ಆಗಸ್ಟು 21 ರಿಂದ ಸೆಪ್ಟಂಬರು 18 ರವರೆಗೆ 9 ದಿನಗಳು ಕುದುರೆ ಜೂಜು ನಡೆಯುವುದಾಗಿದೆ.

★

ಚೀನಾ ಏನು ಮಾಡುತ್ತೆ ?

ಚೀನಾವು 1970 ರ ಹೊತ್ತಿಗೆ 100 ಹೈಡ್ರೋಜನ್ ಬಾಂಬನ್ನು ಹೊಂದಿರುತ್ತದೆ, 1973 ರ ಹೊತ್ತಿಗೆ ಕ್ಷಿಪಣಿಯಿಂದ ಅಮೆರಿಕಾ ಪಟ್ಟಣಗಳಾದ ಲಾಸ್ ಏಂಜಲ್ಸ್, ಸೀಟಲ್‌ಗಳಿಗೆ ಹೊಡೆಯಬಹುದೆಂದೂ ಅಮೇರಿಕಾ ಪರಮಾಣು ನಿಪುಣ ರಾಲ್ಫ್ ಲ್ಯಾಪ್ ಇಲ್ಲಿಯ ಟೈಮ್ಸ್ ಪತ್ರಿಕೆಯಲ್ಲಿ ಬರೆದಿರುವರು.

●

7 ವರ್ಷಗಳಿಂದ ಸಂಬಳವಿಲ್ಲ

ಕೊಟ್ಟಾಯಂ— ತಮಗೆ 7 ವರ್ಷಗಳಿಂದ ಬರಬೇಕಾದ ಸಂಬಳವನ್ನು ಕೂಡಲೇ ಮಂಜೂರ್ಮಾಡಬೇಕೆಂದು ಒಂದು ಖಾಸಗಿ ಸ್ಕೂಲ್‌ಮಾಸ್ಟರ್ ಶಂಕರನಾರಾಯಣ ಪೆಳ್ಳೈಯವರು ವಿದ್ಯಾಧಿಕಾರಿ ಕಚೇರಿ ಮುಂದೆ ಅನಿರ್ದಿಷ್ಟ ಕಾಲ ನಿನ್ನೆ ಉಪವಾಸ ಪ್ರಾರಂಭಿಸಿದರು.

★

ಮೊಖದ್ದಮೆ ವಾಪಸ್ಸಿಗೆ ಅನುಮತಿಯಿಲ್ಲ

ತಿರುವನಂತಪುರಂ— 1965 ರಲ್ಲಿ ಸರಕಾರಿ ನೌಕರರ ಸಹಕಾರ ಸಂಘದಲ್ಲಿ ಕಾರ್ಯದರ್ಶಿಯಾಗಿದ್ದ ದಾಮೋದರ ಮೆನನ್ ಸಂಘದ ಹಣವನ್ನು ದುರುಪಯೋಗಪಡಿಸಿಕೊಂಡು ತಲೆತಪ್ಪಿಸಿಕೊಂಡಿದ್ದನು ; ಆವನ ಮೇಲೆ ಮೊಖದ್ದಮೆಯಾಗಿ ವಾರಂಟಿತ್ತು — ಈ ತಿಂಗಳು 9 ರಂದು ದಸ್ತಗಿರಿಮಾಡಲ್ಪಟ್ಟು ಕಲ್ಲೀಕೋಟೆ ಜಿಲ್ಲಾ ಮ್ಯಾಜಿಸ್ಟ್ರೇಟರ ಮುಂದೆ ಹಾಜರ್ಮಾಡಲ್ಪಟ್ಟನು — ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರು, ಸರಕಾರ ಮೊಖದ್ದಮೆ ವಾಪಸ್ಸು ತೆಗೆದುಕೊಳ್ಳುವಂತೆ ತಿಳಿಸಿರುವದೆಂದೂ ವಾಪಸ್ಸು ಪಡೆಯಲು ಅಪ್ಪಣೆ ಕೊಡಬೇಕೆಂದು ಮನವಿ ಮಾಡಿದರು ಮಾರ್ಕ್ಸ್‌ವಾದಿಸ್ಟರ ಕೈವಾಡ ಆಪಾದಿಸಲಾಗಿದೆ — ಸರ್ಕಾರ ಕಾರಣ ತಿಳಿಸಿಲ್ಲವೆಂದು ಮೊಖದ್ದಮೆ ವಾಪಸ್ಸಿಗೆ ಮ್ಯಾಜಿಸ್ಟ್ರೇಟರು ಅನುಮತಿ ತಿರಸ್ಕರಿಸಿದರು.

ಉಪಚುನಾವಣೆ ಬಹಿಷ್ಕರಿಸಲು

ಶ್ರೀನಗರ— ಕಾಶ್ಮೀರ ಶಾಸನ ಸಭೆಗೆ ನಡೆಯುವ ಉಪಚುನಾವಣೆಯನ್ನು ಬಹಿಷ್ಕರಿಸಲು ಪ್ಲೆಬಿಸೈಟು ತಂಡಗಳು ಮನೆ ಮನೆಗೂ ಹೋಗಿ ತಿಳಿಸುತ್ತಿರುವುದಾಗಿ ವರದಿಯಾಗಿದೆ — ಪೋಲಿಂಗಿನ ದಿನ ಆಗಸ್ಟ್ 18 ರಂದು ಶಾಂತಿಭಂಗವಾಗಿತೆಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಲಾಗಿದೆ — ಹುತಾತ್ಮರ ದಿನದಂದು ಷೇಕ್ ಅಬ್ದುಲ್ಲರು ಪಾಡಿಹ ಭಾಷಣದಲ್ಲಿ, ಉಪ ಚುನಾವಣೆಯನ್ನು ಬಹಿಷ್ಕರಿಸಲು ಮನವಿಮಾಡಿದರು

★

ಮುಖ್ಯಮಂತ್ರಿಗಳ ನುಡಿ

ಬೆಂಗಳೂರು— ಮದರಾಸು ಸರ್ಕಾರದೊಂದಿಗೆ 1924 ರಲ್ಲಿ ಕಾವೇರಿ ನೀರು ಹಂಚಿಕೆ ವಿಷಯದಲ್ಲಿ ಆಗಿರುವ ಒಪ್ಪಂದವನ್ನು ಅತಿಕ್ರಮಿಸುವುದಿಲ್ಲವೆಂದು ಮುಖ್ಯ ಮಂತ್ರಿ ವೀರೇಂದ್ರ ಪಾಟೀಲರು ಹೇಳಿದರು

★

ವೀರೇಂದ್ರ ಪಾಟೀಲರ ಸ್ಪಷ್ಟನುಡಿ

ಬೆಂಗಳೂರು ನಿನ್ನೆ ಜಿಲ್ಲಾಧಿಕಾರಿಗಳ ಸಂಮೇಳನದಲ್ಲಿ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಮಾತನಾಡುತಾ, ಅಧಿಕಾರಿಗಳು ದಕ್ಷ ಆಡಳಿತ ಒದಗಿಸಬೇಇಲ್ಲವೇ ನಿವೃತ್ತರಾಗಬೇಕೆಂದರು ; ಜನತೆಗೆ ದಕ್ಷ ಮತ್ತು ಸ್ವಚ್ಛ ಆಡಳಿತ ಒದಗಿಸುವುದು ಅಧಿಕಾರಿಗಳ ಕರ್ತವ್ಯವೆಂದು ಹೇಳಿದರು ; ರಾಜ್ಯದ ಅನೇಕ ಸಮಸ್ಯೆಗಳನ್ನು ವಿವರಿಸಿದನು : ಇನ್ನು ಮುಂದೆ ಬಡ್ತಿಯನ್ನು ಕೇವಲ ಸರ್ವಿಸ್ ಮೇಲೆ ನೀಡದೆ, ದಕ್ಷತೆ ಮತ್ತು ಗೋಸ್ಕರ ವರದಿಯನ್ನು ಅವಲಂಬಿಸುತ್ತದೆ ಎಂದು ಹೇಳಿದರು.

★

ನವದೆಹಲಿ— ಪಾಕಿಸ್ತಾನವು ಸ್ಥಿರಗೊಳಿಸು ಜರ್ಮನಿಯಿಂದ 22 ಕೋಟಿ ಡಾಲರು ಸಾಲಾ ಪಡೆಯಲು ಸಂಧಾನಮಾಡುತ್ತಿದೆ

ಹಿಂದೂಗಳ ಆಚಾರ

ಸಂಗ್ರಾಹಕರು– "ಶಾಸ್ತ್ರಧರ್ಮನಿರತ" ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

ಬಾಲಕನಿಗೆ ಮಾರ್ಗದರ್ಶನ ಮಾಡುವವರ್ಯಾರು? ತಂದೆ ತಾಯಿಗಳು ಈ ಕೆಲಸವನ್ನು ಸುಲಭವಾಗಿ ಮತ್ತು ಚೆನ್ನಾಗಿ ಮಾಡಬಲ್ಲರು ಹೀಗೆ ತಂದೆಯಿಂದ ಮಗನಿಗೆ, ಮಗನಿಂದ ಮೊಮ್ಮಗನಿಗೆ ಈ ಮಾರ್ಗಗಳು ಬೋಧಿಸಲ್ಪಡುತ್ತವೆ. ಈ ರೀತಿ ಪರಂಪರಾಗತವಾಗಿ ಬಂದಿದ್ದರಿಂದಲೇ ಅವಕ್ಕೆ ಆಚಾರವೆಂದು ಹೆಸರುಬಂದಿದೆ.

ಈ ಆಚಾರಗಳನ್ನು ಏಕೆ ಅನುಷ್ಠಿಸಬೇಕು? ಅನುಷ್ಠಿಸುವುದರಿಂದ ನಮಗೆ ಏನು ಪ್ರಯೋಜನವಾಗುತ್ತದೆ? ಎಂಬ ವಿಚಾರಗಳನ್ನು ತಿಳಿಯಬೇಕಾಗಿದ್ದರೆ ವೇದ, ಸ್ಮೃತಿ ಮೊದಲಾದ ಧರ್ಮಶಾಸ್ತ್ರಗಳನ್ನು ಓದಬೇಕು. ಹಿಂದಿನ ಕಾಲದಲ್ಲಿ ಪ್ರತಿಯೊಬ್ಬ ಹಿಂದುವೂ ಕೂಡ ಇಂಥಾ ಗ್ರಂಥಗಳ ಪರಿಚಯ ಹೊಂದುತ್ತಿದ್ದನು. ಆದರೆ ಅಪಾರವಾಗಿರುವ ಶಾಸ್ತ್ರಗಳಲ್ಲಿ ಪ್ರತಿಯೊಬ್ಬರೂ ಆಚಾರಕಾಂಡವಿರುವ ಗ್ರಂಥಗಳನ್ನು ಅಧ್ಯಯನ ಮಾಡಲು ಸಾಧ್ಯವಿಲ್ಲ. ಆದಕಾರಣ ಪೂರ್ವಿಕರು ಗ್ರಂಥಗಳನ್ನು ಚೆನ್ನಾಗಿ ವಿಮರ್ಶೆಮಾಡಿ, ನಮ್ಮ ಆಚರಣೆ ಹೇಗಿರಬೇಕೆಂಬುದನ್ನು ತಾವು ಸ್ವತಃ ಆಚರಿಸಿ ಮಾರ್ಗದರ್ಶನ ಮಾಡಿರುತ್ತಾರೆ. ಆದಕಾರಣ ಇದಕ್ಕೆ "ಸಂಪ್ರದಾಯ" ಎಂದು ಹೆಸರುಬಂದಿದೆ.

ಈ ಸಂಪ್ರದಾಯಗಳನ್ನು ಆಚರಿಸುತ್ತಾ ಬರಬೇಕೇ ಹೊರತು, ಅವುಗಳಿಗೆ ಕಾರಣ ತಿಳಿಯದೇ ಇರುವುದರಿಂದ ಬಿಡಬಾರದು. ಶಾಸ್ತ್ರಗಳನ್ನು ಪರಿಶೀಲಿಸಿದರೆ ಅದಕ್ಕೆ ಕಾರಣ ತಿಳಿದುಬಂದೇ ಬರುತ್ತದೆ. ಉದಾಹರಣೆಗೆ, ಕೆಲವರ ಮನೆಯಲ್ಲಿ ಹೆಂಗಸರು ಕುಂಬಳಕಾಯಿಯನ್ನು ಒಡೆಯುವದಿಲ್ಲ. ಯಾರಾದರೂ ಗಂಡಸರ ಕೈಲಿ ಕೊಟ್ಟು ಒಡೆಸಿ ನಂತರ ಹೆಚ್ಚುತ್ತಾರೆ. ಇದಕ್ಕೆ ಕಾರಣವೇನು? ಇದು ಮೂಢ ನಂಬಿಕೆಯೇ? ಅಥವಾ ಶಾಸ್ತ್ರ ವಿಧಿಯೇ? ಎಂಬುದು ಬಹಳ ದಿವಸಗಳ ವರೆಗೆ ನನಗೆ ತಿಳಿದಿರಲಿಲ್ಲ. ಒಂದು ದಿನ ಪೂರ್ವಪ್ರಯೋಗರತ್ನಾಕರ ಎಂಬ ಗ್ರಂಥದಲ್ಲಿ ಗರ್ಭಾದಾನ ಪ್ರಕರಣವನ್ನು ಓದುತ್ತಿರುವಾಗ ಈ ಶ್ಲೋಕ ಕಂಡುಬಂತು–

ಶ್ಲೋ॥ ದೀಪಪ್ರಲೋಪನಂ ಪುಂಸಾಂ ಕೂಶ್ಮಾಂಡಸ್ಫೋದನಂ ಸ್ತ್ರಿಯಾಃ।
ಅಚಿರೇಣೈವ ಕಾಲೇನ ವಂಶಚ್ಛೇದೋಭವೇದ್ಧ್ರುವಂ॥

ಅಂದರೆ, ಪುರುಷರು ದೀಪವನ್ನು ಆರಿಸುವುದು, ಸ್ತ್ರೀಯರು ಕುಂಬಳಕಾಯನ್ನು ಒಡೆಯುವುದು, ಶಾಸ್ತ್ರನಿಷಿದ್ಧ ವೆಂದು ಅರ್ಥವಾಯಿತು. ಇದೇ ರೀತಿ ನಮ್ಮ ಪ್ರತಿಯೊಂದು ಆಚಾರಕ್ಕೂ ಒಂದೊಂದು ವಿವರಣೆ ಇರುತ್ತೆ. ಆದರ ಪರಿಚಯವನ್ನು ಸಾಧ್ಯವಾದಷ್ಟು ಮಾಡಿಕೊಡುವುದೇ ಈ ಗ್ರಂಥದ ಉದ್ದಿಶ್ಯವಾಗಿರುತ್ತೆ.

Golden Jubilee of 'Satyavadi'

The golden jubilee of the 'Satyavadi' is to be celebrated in July.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi Sri O era Talkies, Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

ಪುಡ್‌ಲಾಂಡ್ ಜನಭರಿತ 3 ನೇ ವಾರ

ಅಮೋಘ ಆರಂಭ

— ಮನೋಹರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

Jhuk Gaya Aasman

ಜುಕ್ ಗಯಾ ಆಸಮಾನ್

ಪಾತ್ರ — ರಾಜೇಂದ್ರಕುಮಾರ್, ಸ್ಮೈರಾಬಾನು, ಪ್ರೇಂ ಚೋಪ್ರ, ರಾಜೇಂದ್ರನಾಥ್

ಸಂಗೀತ– ಶಂಕರ್ ಜೈಕಿಷನ್ [ದಿನ 3 ಪ್ರದರ್ಶನಗಳು]

ಆಪೇರ— ಅಮೋಘ 2 ನೇ ವಾರ

ಚಿತ್ರಾಕರ್ಷ ಕನ್ನಡ ಚಿತ್ರ

ನಮ್ಮ ಊರು

ಪಾತ್ರ : ಉದಯ ಕುಮಾರ್ ಅಶ್ವತ್ಥ್ ಬಾಲಕೃಷ್ಣ ಕೃಷ್ಣಕುಮಾರಿ

Help The Gorakshana

ಗೋರಕ್ಷಣಕ್ಕೆ ಜೊಂಜಲು ಸೀಡಿ

ಶ್ರೀದಕ್ಷಿಣಕಾ ಜಗದ್ಗುರು ಮಹಾಸಂಸ್ಥಾನಗಳವರು ಶ್ರೀ ಶೃಂಗೇರಿ ಜಗದ್ಗುರು ಮಹಾಸಂಸ್ಥಾನಗಳವರು ಉದ್ಘಾಟನಾ ಸಂಸ್ಮರಣ ಸಂಪುಟಕ್ಕಾಗಿ

ಕನ್ನಡನಾಡಿನಲ್ಲಿ ಗೋರಕ್ಷಣೆ ಪಾಕ್ಷಣಿಕವೇ, ತಾತ್ಕಾಲಿಕಾಂ, ಪಶುವೈದ್ಯ, ವಿಚಾರಗಳ ವಿಶೇಷ ಪ್ರಚಾರಂ ಪಡಿಸಲಿಕ್ಕೆ ; ಪಾರ್ಶ್ವದ ಬೆಲೆ 50 ನ್ಯೆಸೆ

— ಗೋರಕ್ಷಣೆ ಸ್ವಯಸಕ್ಕಿಯಕರಂ ವಿನಂತಿ —

ಗೋರಕ್ಷಣಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನಸಹನ್ನೂ ದಯದಾಕ್ಷಿಣ್ಯದಿಂದ ಕಳಿಸಿಕೊಡಬೇಕಾಗಿ ವಿನಂತಿ

ಡಾ॥ ಪಿ ಎಸ್ ನಾರಾಯಣ್, ಶ್ರೀ ಪಿಎಸ್ ವಿಶ್ವನಾಥ್ ಜಯನಗರ, ಬೆಂಗಳೂರು

ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರ, ಮೈಸೂರು

ಶ್ರೀ ಅನಂತಶಯನಂಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರಂಸಭಾ ಹೊಂಗಸಂದ್ರ

ಗೋರಕ್ಷಣಾ ಆಫೀಸು ಸತ್ಯವಾದಿ ಪ್ರೆಸ್ ಚಾಮರಾಜಪುರಂ ಮೈಸೂರು 4

ವಿಳಾಸ — ಗೋರಕ್ಷಣ ಆಫೀಸು 1967 ಚಾಮರಾಜಪುರಂ, ಮೈಸೂರು

Cow Slaughter should be banned Immediately

.....

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

ಗೋರಕ್ಷಣೆ ಮಾಡಿ, ಪಾಕ್ಷಣಿಕವಾಗಿ ಅಲ್ಪಾಂಗಳು ಹೆಚ್ಚಿ ಬಾಳ್ವಂತೆ ಸಡೆಯಲಿ

Edited, Printed & Published by Dharmaprabhara Nisata M S Krishna Rao (Proprietor) at the Satyavadi Press Chamarrajapuram, Mysoe 4